ದಿನಾಂಕ: 16-1-2016 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆ: ಶ್ರೀ ಪಿ ಜಿ ಹೆಗಡೆ, ವಕೀಲರಿಂದ:

ನಾನು ನನ್ನ ಮುಖ್ಯ ವಿಚಾರಣೆ ಕುರಿತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಹಾಗೂ ಅದನ್ನು ನಾನು ಹೇಳಿ ಬರೆಸಿ ಓದಿ ನೋಡಿ ಸಹಿ ಮಾಡಿರುತ್ತೇನೆ.

ಕುಮಟಾ ತಾಲೂಕು ಹಳಕಾರ ಗ್ರಾಮದ ಸರ್ವೆ ನಂಬರ್ 11-4 ರ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಅದೇ ರೀತಿ ಹಳಕಾರ ಗ್ರಾಮದ ಸರ್ವೆ ನಂಬರ್ 11-10 ಇ ದ 2013-2014ರ ಸಾಲಿನ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು, ಅದೇ ರೀತಿ ಹಳಕಾರ ಗ್ರಾಮದ ಸರ್ವೆ ನಂ. 11-10 ಇ ದ 2012-2013 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ಹಳಕಾರ ಗ್ರಾಮದ ಸರ್ವೆ ನಂಬರ್ 138-2ಬ1 ರ 2013-2014 ನೇ ಸಾಲನ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು, ಹಳಕಾರ ಗ್ರಾಮದ ಎಂ ಆರ್ ನಂ. ಎಚ್ 43 ರ ಉತಾರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು, ಹಳಕಾರ ಗ್ರಾಮದ ಎಂ ಆರ್ ನಂ. ಎಚ್ 36 ರ ಉತಾರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು ಹಳಕಾರ ಗ್ರಾಮದ ಎಂ ಆರ್ ನಂಬರ್ ಎಚ್ 23 ರ 2011-2012ರ ಉತಾರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 7 ಎಂದು, ಗಣೇಶ ಗಣಪತಿ ಮಡಿವಾಳ ಇವರು ಭವಾನಿ ಗಣಪತಿ ನಾಯ್ಕರವರಿಗೆ ಬರೆದುಕೊಟ್ಟಿರುವ ನೋಂದಾಯಿತ ಕ್ರಯಪತ್ರದ ದೃಢಿಕೃತ ನಕಲನ್ನು ಹಾರುಪಡಿಸಿದ್ದು ಅದನ್ನು ನಿಪಿ 8 ಎಂದು, ನಾಗಪ್ಪ ನಾರಾಯಣ ಗುನಗಾ ಇವರು ಮಂಜುನಾಥ ಶಾಂತಪ್ಪ ಗುನಗಾ ಇವರಿಗೆ ಬರೆದುಕೊಟ್ಟಿರುವ ಕ್ರಯಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 9 ಎಂದು, ಹೊಲನಗದ್ದೆ ಗ್ರಾಮಪಂಚಾಯತಿ ವಾರ್ಡ ನಂಬರ್ 4 ಇಮಾರತು ನಂ 146 ರ 2008-2009 ರ ಕರಾಕರಣಿಯಾದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 10 ಎಂದು, ಹೊಲನಗದ್ದೆ ಗ್ರಾಮಪಂಚಾಯತಿ ವಾರ್ಡ ನಂಬರ್ 4 ಇಮಾರತು ನಂಬರ್ 146 ರ 2008-2009 ರ ಕರಾಕರಣಿಯಾದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 11 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿದ್ದರಿಂದ ಮುಂದೂಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಿವಿಲ್ ಜಡ್ಜ್ ಕುಮಟಾ.